ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಜಯಪ್ರಕಾಶ್ ಪಿ. ಅವರು ಪ್ರಕಾಶ್ ಪೊನ್ನಾಚಿ ಎಂದು ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಮಣ್ಣಿಗೆ ಬಿದ್ದ ಮಳೆ ಅವರ ಕವನ ಸಂಕಲನ. ಕಥೆ ಪ್ರಬಂಧ ಲೇಖನಗಳನ್ನು ಬರೆಯುತ್ತ, ಅತ್ತ ಸಿನಿಮಾ ಕ್ಷೇತ್ರದಲ್ಲಿಯೂ ಸಕ್ರಿಯರಾಗಿ ತೊಡಗಿಸಿಕೊಂಡಿದ್ದಾರೆ. ವೃತ್ತಿಯಲ್ಲಿ ಶಿಕ್ಷಕರು.

ಆ ಪಿಳ್ಳಾವಿಗ್ ಬಿದ್ಬುಡ್ಲ ಅನ್ನು, ಹೋಗಿ ಬಿದ್ಬುಡ್ತೀನಿ. ಈ ಪೂಜೆ ಗೀಜೆ ದ್ಯಾವ್ರು ದಿಂಡ್ರು ಅಂದ್ರೆ ಇನ್ನೊಂದ್ಕಿತ ನಿಂಗ್ ಮುಖಾನು ತೋರ್ದೆ ದೇಶಾಂತ್ರ ವಂಟೋಯ್ತಿನಿ ಅಷ್ಟೆಯಾ' ಎಂದು ಹೆದರಿಸಿಬಿಡುತ್ತಿದ್ದ. ಇದನ್ನು ಕಂಡು ಸುಶೀಲಮ್ಮ ಅವನ ತಂಟೆಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟರು. ದೇವರು ಎಂದರೆ ಸಾಕು ಹೀಗೆ ಮೈ ಮೇಲೆ ಮುಳ್ಳು ಚುಚ್ಚಿದಂತೆ ಆಡುವವನನ್ನು ಅದ್ಹೇಗೆ ಈಗ ಪೂಜಾರಿಕೆಗೆ ಒಪ್ಪಿಸುವುದು ಎಂಬುದೇ ಬಸಯ್ಯ ಹಾಗೂ ಸುಶೀಲಮ್ಮನವರಿಗೆ ದೊಡ್ಡ ಚಿಂತೆಯಾಗಿ ಹೋಗಿತ್ತು. ಈ ಬಾರಿಯ ಉಗಾದಿ ಹಬ್ಬಕ್ಕೆ ದೊಡ್ಡ ಮಗ ಸೊಸೆ ಹಾಗೂ ಮಗಳು ಅಳಿಯ ಎಲ್ಲರನ್ನು ಕರೆಸಿ ಇವನಿಗೆ ಬುದ್ಧಿ ಹೇಳಿಸಿ ಹೇಗಾದರೂ ಇವನನ್ನು ಒಂದು ದಾರಿಗೆ ತರಲೇಬೇಕು ಎಂದು ನಿರ್ಧರಿಸಿದರು.

ಹಟ್ಟಿಯ ಹಜಾರದಲ್ಲಿ ಎಲ್ಲರೂ ಕುಳಿತಿದ್ದರು. ಪೂಜಾರಿ ಬಸಯ್ಯನವರು ಯುಗಾದಿ ಪೂಜೆ ಮುಗಿಸಿ ಮಂಟೆಲಿಂಗನ ಪ್ರಸಾದವನ್ನು ಕುಕ್ಕೆಯಲ್ಲಿ ಹಿಡಿದುಕೊಂಡು ಮನೆಯ ಒಳಗೆ ಬಂದರು. ಮಂಗಳಾರತಿಯಲ್ಲಿ ಬಂದ ಚಿಲ್ಲರೆ ಹಣವನ್ನೆಲ್ಲಾ ಸುರಿದು ಮಗಳು ಶಾಂತಿಗೆ ಎಣಿಸಲು ಹೇಳಿ 'ಅಳಿಯಂದ್ರೆ ಈ ಬಡ್ಡೆತ್ತದ್ಕೆ ನೀವಾದ್ರು ವಸಿ ಬುದ್ದಿ ಯೋಳಿ. ಬೆಳ್ಗದ್ದು ಮಾಡುದ್ನ ಉಂಡ್ಬುಟ್ಟು ದನ ತಿರಗ್ದಂಗ್ ತಿರುಗುದ್ರೆ ಜೀವನ ಆಗುದಿಲ್ಲ. ನಾನು ಒಬ್ನೆ ಎಷ್ಟು ಅಂತ ಸಾಕಾಗ್ಲಿ. ನಂಗು ವಯಸ್ಸಾಯ್ತಾ ಬಂತು ಉಪಾಸ ಇದ್ಕಂಡು ಪೂಜೆ ಮಾಡು ತ್ರಾಣ ನಂಗು ಕಡ್ಮೆ ಆಯ್ತಾ ಅದೆ. ಈ ನನ್ ಮಗ ಗೂಳಿ ಕೂತಂಗ್ ಹಟ್ಟಿಲೆ ಕೂತವ್ನಲ್ಲಾ. ಅಪ್ಪನ್ ಕಷ್ಟಸುಖ ಏನು ಅಂತ ಅರ್ಥ ಆದ್ದ ಯೋನ ಕೇಳಿ ಬಡ್ಡಿ ಹೈದಂಗೆ? ನಮಗೆ ದೇವ್ರಾಗಲ್ಲ, ಪೂಜೆ ಆಗಲ್ಲ, ಗಂಟೆ ಆಗಲ್ಲ ಅಂತ ಆ ನಮ್ಮಪ್ಪ ಮಂಟೆದೊಡಯ್ನೆ ತಿರಸ್ಕಾರ ಮಾಡ್ತಾನಲ್ಲ, ಆ ದ್ಯಾವ್ರು ಇವನ್ಗೆ ಒಳ್ಳೇದ್ ಮಾಡನಾ?' ಎನ್ನುತ್ತಾ ಮೂಲೆಯಲ್ಲಿ ಕುರಿಮರಿಗೆ ಎಸಳು ತಿನ್ನಿಸುತ್ತಿದ್ದ ಮಾದೇಶನನ್ನೊಮ್ಮೆ ಗುರಾಯಿಸಿದರು. ಮೊದಲೆ ಬುದ್ಧಿಮಾತುಗಳಿಗೆ ತಲೆಸಿಡಿದವನಂತಾಡುತ್ತಿದ್ದ ಅವನು ತನ್ನ ಅಣ್ಣ ಅತ್ತಿಗೆ ಅಕ್ಕ ಭಾವ ಎಲ್ಲರೆದುರು ಅವಮಾನವಾದವನಂತೆ ಹಲ್ಲುಮುಡಿ ಕಚ್ಚುತ್ತಾ ಕಣ್ಣುಗಳನ್ನು ಕೆಂಪಿನ ಉಂಡೆಗಳಂತೆ ಹುಬ್ಬೇರಿಸಿ ಕುಳಿತಿದ್ದ. ತಮ್ಮನನ್ನು ಗಮನಿಸಿದ ಶಾಂತಿ, 'ಅಪ್ಪಯ್ಯ ವಸಿ ಯೋಳೋತರ ಯೋಳುದ್ರೆ ಆಗುದಿಲ್ವೆ. ಹಿಂಗ್ ಸುಮ್ನೆ ಬೈತಿದ್ರೆ ಅವನ್ತಾನ್ ಯೋನ್ ಮಾಡಾನು ಯೋಳು? ಇನ್ನ ಚಿಕ್ಕ ಮಗ. ಸರಿ ಹೋಯ್ತಾನೆ ಬುಡು' ಎಂದು ಪರಿಸ್ಥಿತಿಯನ್ನು ತಿಳಿಗೊಳಿಸಲು ಯತ್ನಿಸಿದಳು.

'ಅಲ್ಲಾ ಕಣ್ಲಾ ಮಾದೇಶು. ನಾನು ಐಟಿಐ ಮಾಡವ್ನಿ ನಿಂಗೆ ಗೊತ್ತಲಾ? ನಾನು ಅಂಗಡಿ ಗಿಂಗಡಿ ಅಂತ ಹನುರಾಗ ಸೆಟ್ಲ್ ಆಗ್ಬುಟ್ಟವ್ನಿ. ಐಕೂಳ್ನೂ ಇಸ್ಕೂಲ್‌ಗ್ ಸೇರ್‍ಸ್ಬುಟ್ಟವ್ನಿ ಬೇರೆ, ಈ ಟೇಮ್ಲಿ ನಾನು ಊರ್ಗ್ ಬಂದು ಇರುಕಾಯ್ತಾದ್ದಾ?. ಅಪ್ಪಯ್ಯಂಗು ವಯಸ್ಸಾಯ್ತ ಬಂತು. ಅವ್ರು ಎಷ್ಟು ಅಂತ ಸಾಕಾಗಾರ್ಲ? ಊರ್ಲಿ ಪೂಜಾರ್ಕೆಗೆ ಹೆಸ್ರಾದ್ ಮನೆ ನಮ್ದು. ಈಗ ಅದ್ನ ಬುಡುಕಾಗುತ್ತಾ? ಆ ನಮಪ್ಪನ್ನ ಯತ್ತಾತ ಮುತ್ತಾತ್ನ್ ಕಾಲ್ದಿಂದ ಪೂಜುಸ್ಕಂಡು ಬಂದವಿ. ಬುಡುದ್ ಬ್ಯಾಡ ಕಣ್ಲಾ. ಹೆಂಗೋ ಮನಸು ಬದ್ಲಾಸ್ಕಳ್ಲ. ಪೂಜಾರ್ಕೆ ಬುಟ್ರೆ ಸಾಕು ಅಂತ ಸ್ವಾಮ್ಗುಳ್ ಹಟ್ಟವ್ರು ಕಾಯ್ಕಂಡವ್ರೆ ತಾವ್ ವಯುಸ್ಕುಳುಕೆ. ಅಂತದ್ರಲ್ಲಿ ತಲ್ತಲಾಂತರದಿಂದ ಬಂದಿರೋ ಕಸುಬು ಬುಡೂದ್ ಸರ್‍ಯಾ? ನೀನೇ ವಸಿ ಯೋಚ್ನೆ ಮಾಡ್ಲಾ, ಆ ಮಂಟೆಲಿಂಗನ್ನ ಪೂಜ್ಸುಕು ಪುಣ್ಯ ಮಾಡಿರ್ಬೇಕು ಒಪ್ಗಲ್ಲಾ. ಅವ್ವ ಅಪ್ಪನ್ನೂ ಬ್ಯಾಸ್ರಾ ಮಾಡ್ಬೇಡ' ಎಂದು ಶಿವಣ್ಣ ಸ್ವಲ್ಪ ಹೆದರಿಕೊಂಡೇ ಹೇಳಿದ ಮಾತುಗಳಿಗೆ ಎಲ್ಲವನ್ನು ರೊಚ್ಚಿನಿಂದಲೇ ಕೇಳಿಸಿಕೊಂಡಿದ್ದ ಮಾದೇಶ ಒಮ್ಮೆಗೆ ರುದ್ರರೂಪ ತಾಳಿದವನಂತಾದ. 'ಅಲ್ಲಾ ಕಣ್ಲಾ ಅಣ್ಣಯ್ಯ ಮಾತ್ಯೊತ್ತಿದ್ರೆ ನಾನ್ ಓದ್ ಕಿಸದವ್ನಿ. ಅದು ಇದು ಅಂದಾಯಲ್ಲ.ನಾನೇನ್ ತರಕುರಿ ಅಂದ್ಕುಂಡಿದಾಯೇನ್ಲಾ? ಮಾದಪ್ಪನ ಬೆಟ್ಟಾಗ ಎಸ್ಸೆಲ್ಸಿ ಮಾಡವ್ನಿ ನಾನುವೆಯಾ. ಅಲ್ಲ. ಮನೇಗ್ ಹಿರಿ ಮಗ